# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್.ಸಿ. 110/2017**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ರಾಮಕೃಷ್ಣ ಅಯ್ಯಂಗಾರ್ | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಶ್ರೀನಿವಾಸ್ ಅಯ್ಯಂಗಾರ್ | **11.09.2024** |
| **ವಯಸ್ಸು** | ಃ 67 ವರ್ಷ | |
| **ವೃತ್ತಿ** | ಃ ನಿವೃತ್ತ ಎ.ಆರ್.ಟಿ.ಒ | **ಪ್ರಾ.ಸಾ. ಃ 31** |
| **ವಾಸಸ್ಥಳ** | ಃ ಸರಸ್ವತಿಪುರಂ, ಮೈಸೂರು | **ಚಾ.ಸಾ. ಃ 51** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2013* ರಿಂದ *2017* ರವರೆಗೆ ನಾನು ಮೈಸೂರು ಪಶ್ಚಿಮ ಆರ್.ಟಿ.ಒ ಕಛೇರಿಯಲ್ಲಿ ಎ.ಆರ್.ಟಿ.ಒ ಆಗಿ ಕೆಲಸ ಮಾಡಿದ್ದೆ. ದಿಃ*05.01.2017* ರಂದು ಮೈಸೂರು ವಿ.ವಿ.ಪುರಂ ಪೋಲೀಸ್ ಠಾಣೆಯಿಂದ ನಮ್ಮ ಕಛೇರಿಗೆ ಕೆಎ-*09*-ಹೆಚ್.ಬಿ-*2770* ಸಂಖ್ಯೆಯ ವಾಹನದ ವಿವರಗಳನ್ನು ಕೇಳಿ ಪತ್ರ ಬಂದಿತ್ತು. ನಾನು ಆ ವಾಹನಕ್ಕೆ ಸಂಬಂದಪಟ್ಟಂತೆ ದಿಃ*05.01.2017* ರಂದು ಬಿ ***extract*** ನ ಪ್ರತಿಯನ್ನು ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದಾಖಲೆ ಆ ವಾಹನದ ಬಿ ***extract*** ನ ಪ್ರತಿಯಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿ.ಪಿ-*116* ಮತ್ತು ಸಹಿಯನ್ನು ನಿ.ಪಿ-*116*(ಎ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ದಾಖಲೆ ತನಿಖಾಧಿಕಾರಿಯಿಂದ ಬಂದಿದ್ದ ಪತ್ರ ಇದೆ. ಸದರಿ ಪತ್ರವನ್ನು ನಿ.ಪಿ-*117* ಎಂದು ಗುರುತಿಸಿದೆ.

**ಪಾಟೀ ಸವಾಲು ಃ 3 ರಿಂದ 6 ನೇ ಆರೋಪಿ ಪರ ವಕೀಲರವರಿಂದಃ-**

*2.* ತನಿಖಾಧಿಕಾರಿಯಿಂದ ಪತ್ರ ಬಂದ ದಿನವೇ ಆ ವಾಹನದ ಮಾಹಿತಿ ಕೊಟ್ಟಿದ್ದೇನೆ. ಆ ವಾಹನ ದ್ವಿಚಕ್ರ ವಾಹನ ಇದೆ. ಆ ವಾಹನಕ್ಕೆ ಆ ದಿನಾಂಕದಂದು ***Fitness certificate*** ಚಾಲ್ತಿಯಲ್ಲಿತ್ತು. ಆದರೆ ***insurance*** ಚಾಲ್ತಿಯಲ್ಲಿತ್ತೊ ಇಲ್ಲವೊ ನನಗೆ ಗೊತ್ತಿಲ್ಲ.

**ಉಳಿದ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*